**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-444/2022 **PW**-1

**ದಿಃ 02.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಎ ಆರ್ ಎ ವಕೀಲರಿಂದಃ**

**1.** ನನ್ನ ಮದುವೆ 2008 ನೇ ಸಾಲಿನಲ್ಲಿ ಆಗಿದೆ ಎಂದರೆ ಸರಿ. ನನ್ನ ಮದುವೆ ನನ್ನ ತಂದೆ ತೀರಿಕೊಂಡ ನಂತರ ಹಾಗೂ ಪ್ರತಿವಾದಿ 2 ಮತ್ತು 3 ರವರು ಮದುವೆಯಾಗುವದಕ್ಕಿಂತ ಮೊದಲು ಆಗಿದೆ ಎಂದರೆ ಸರಿ. ನನ್ನ ಗಂಡ ಮದುವೆ ಕಾಲದಲ್ಲಿ ಮೂಲತಃ ಕೊಪ್ಪಳದವರು ಇದ್ದರೆಂದರೆ ಸರಿ. ಮದುವೆಯಾದ ನಂತರ ಎಲ್ಲರೂ ಬೆಂಗಳೂರಿನಲ್ಲಿ ವಾಸಕ್ಕೆ ಬಂದರೆಂದರೆ ಸಾಕ್ಷಿ ನನ್ನ ಯಜಮಾನರು ಹುಟ್ಟಿದ್ದು ಬೆಂಗಳೂರಿನಲ್ಲಿ ಹಾಗೂ ಇದ್ದಿದ್ದು ಬೆಂಗಳೂರಿನಲ್ಲಿ ಎನ್ನುತ್ತಾರೆ. ನಮ್ಮ ಸಮಾಜದಲ್ಲಿ ಮದುವೆ ಖರ್ಚನ್ನು ಗಂಡಿನ ಮನೆಯವರು ಮಾಡುತ್ತಾರೇಂದರೆ ಸರಿ. ನಮ್ಮ ಸಮಾಜದಲ್ಲಿ ಮದುವೆಗೆ ಮೊದಲು ಹಾಗೂ ಮದುವೆ ನಂತರದ ಕಾರ್ಯಗಳನ್ನು ಹೆಣ್ಣಿನ ಮನೆಯವರೇ ಮಾಡುತ್ತಾರೆಂದರೆ ಸಾಕ್ಷಿ ಎಸ್ ಎಸ್ ಕೆ ಸಮಾಜದಲ್ಲಿ ಮಾಡುತ್ತಾರೆ ಆದರೆ ನನ್ನ ಮದುವೆ ಸಮಯದಲ್ಲಿ ಅವೆಲ್ಲವನ್ನೂ ಮಾಡಿಲ್ಲ ಎನ್ನುತ್ತಾರೆ. ಅಂದರೆ ನಿಮ್ಮ ಮದುವೆಗೆ ಮುಂಚಿನ ಕಾರ್ಯಕ್ರಮಗಳು ಹಾಗೂ ನಂತರದ ಕಾರ್ಯಕ್ರಮಗಳನ್ನು ಮಾಡಿಲ್ಲವೇ ಎಂದರೆ ಸಾಕ್ಷಿ ಬಳೆ ಕಟ್ಟುವ ಕಾರ್ಯಕ್ರಮ ಮಾಡಿದ್ದರು ಉಳಿದವುಗಳನ್ನು ಮಾಡಿಲ್ಲ ಎನ್ನುತ್ತಾರೆ. ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮದುವೆ ಮುಂಚಿನ ಹಾಗೂ ನಂತರದ ಕಾರ್ಯಕ್ರಮಗಳನ್ನು ಪ್ರತಿವಾದಿ 1 ರಿಂದ 3 ರವರು ಸೇರಿಕೊಂಡು ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮುಂಚಿನ ಹಾಗೂ ನಂತರದ ಕಾರ್ಯಕ್ರಮಗಳನ್ನು ಯಾರು ಮಾಡಿದ್ದಾರೆಂದರೆ ಸಾಕ್ಷಿ ಕಾರ್ಯಕ್ರಮಗಳನ್ನೇ ಮಾಡಿಲ್ಲ ಎನ್ನುತ್ತಾರೆ. ನಮ್ಮ ಎಸ್ ಎಸ್ ಕೆ ಸಮಾಜದಲ್ಲಿ ವರದಕ್ಷಿಣೆ ಕೊಡುವ ಮತ್ತು ತೆಗೆದುಕೊಳ್ಳುವ ಪ್ರವೃತ್ತಿ ಇಲ್ಲ ಎಂದರೆ ಸರಿ. ಆದರೆ ನಮ್ಮ ಸಮಾಜದಲ್ಲಿ ರೂಡಿ ಪ್ರಕಾರ ಬಂಗಾರದ ಒಡವೆಗಳು, ಬೆಳ್ಳಿ ಸಾಮಾನುಗಳು ಹಾಗೂ ಬಟ್ಟೆ ಕೊಡುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮದುವೆ ಸಮಯದಲ್ಲಿ ಪ್ರತಿವಾದಿ 1 ರಿಂದ 3 ರವರು ಸೇರಿ 25 ತೊಲ ಬಂಗಾರ ಕೊಟ್ಟಿರುತ್ತಾರೆಂದರೆ ಸಾಕ್ಷಿ ನಮ್ಮ ತಂದೆ ನಮಗೇಂದು ಮಾಡಿಸಿದ ಆಭರಣಗಳನ್ನು ಅಂದರೆ 30 ಗ್ರಾಂ ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಹಾಗೂ ಒಂದು ಕೆ ಜೆ ಬೆಳ್ಳಿ ಸಾಮಾನುಗಳನ್ನು ಕೋಟ್ಟಿರುತ್ತಾರೆಂದರೆ ಸಾಕ್ಷಿ

ಇಲ್ಲ ಎನ್ನುತ್ತಾರೆ. ಮದುವೆ ಸಮಯದಲ್ಲಿ ಬೆಳ್ಳಿ ಸಮಯ ಆರತಿ ಸೆಟ್ , ಕಾಲು ಚೈನ , ಇವುಗಳನ್ನು ಕೋಟ್ಟಿದ್ದಾರೋ ಇಲ್ಲವೋ ಎಂದರೆ ಸಾಕ್ಷಿ ಬೆಳ್ಳಿ ಕಾಲುಚೈನು ಕೊಟ್ಟಿರುತ್ತಾರೆ ಎನ್ನುತ್ತಾರೆ. ಮೇಲೆ  ಹೇಳಿದ ಸಾಮಾನುಗಳನ್ನು ಕೊಟ್ಟಿರುತ್ತಾರೆ ಆದರೂ ನಾನು ಕೋಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಸಂಬಂದಿಕರಾದ ಮೋಹನ ಮೇಹರವಾಡೆ ರವರು ನಮ್ಮ ಕುಟುಂಬದಲ್ಲಿ ಎನಾದರೂ ಹಣಕಾಸಿನ ತೊಂದರೆ ಇದ್ದರೆ ಸಹಾಯ  ಮಾಡುತ್ತಿದ್ದರು ಎಂದರೆ ಸರಿ. ಮದುವೆ ಸಮಯದಲ್ಲಿ ಬಂಗಾರದ ಸಾಮಾನು ಕೊಡಲು ಸದರಿ ಮೇಹರವಾಡೆ ರವರು ಹೆಚ್ಚಿನ ಸಹಾಯ ಮಾಡಿರುತ್ತಾರೆಂದರೆ ಸಾಕ್ಷಿ ಇಲ್ಲ ಬಂದಂತಹ ಬಾಡಿಗೆಯನ್ನು ತೆಗೆದುಕೊಂಡು ವ್ಯವಹಾರ ಮಾಡಿರುತ್ತಾರೆ ಎನ್ನುತ್ತಾರೆ. ಮನೆಯಲ್ಲಿದ್ದ ಬಂಗಾರದ ಜೊತೆ ಹೆಚ್ಚಿನ ಬಂಗಾರ ನನಗೆ ಕೊಡಬೇಕಾಗಿದ್ದು ಅದನ್ನು ಮೇಹರವಾಡೆ ರವರ ಕಡೆಯಿಂದ ಹಣ ತೆಗೆದುಕೊಂಡು ಮಾಡಿಸಿ ಹಾಕಿರುತ್ತಾರೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ಅಣ್ಣಂದಿರ ಮದುವೆ ನನ್ನ ಮದುವೆಯೂದ ಎರಡು ತಿಂಗಳ ನಂತರ ನಡೆದಿರುತ್ತದೆ. ನನ್ನ ಅಣ್ಣಂದಿರ ಮದುವೆ ಸಮಯದಲ್ಲಿ ಮನೆಯ ಆರ್ಥಿಕ ಸ್ದಿತಿ ಸಂಪೂರ್ಣವಾಗಿ ಕೆಟ್ಟಿತ್ತು ಎಂದರೆ ಸಾಕ್ಷಿ ಹಾಗೇನೂ ಇಲ್ಲ ಎನ್ನುತ್ತಾರೆ ಚೆನ್ನಾಗಿದ್ದರು ಎನ್ನುತ್ತಾರೆ. ಮದುವೆ ಸಮಯದಲ್ಲಿ ಕೂಡಾ ನಮಗೆ 10 ತೊಲ ಬಂಗಾರವನ್ನು ಕೋಟ್ಟಿರುತ್ತಾರೆಂದರೆ ಸಾಕ್ಷಿ 10 ತೊಲ ಕೊಟ್ಟಿರುವದಿಲ್ಲ ತಲಾ 5 ತೊಲ ಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಅವರ ಮದುವೆ ಸಮಯದಲ್ಲಿ ನಮಗೆ 10 ತೊಲ ಬಂಗಾರ  ಹಾಗೂ ಅಳಿಯಂದಿರಿಗೆ 2 ತೊಲ ಚೈನು, ಹಾಗೂ ಒಂದು ತೊಲ ಸುತ್ತು ಉಂಗುರ ಒಂದುವರೆ ತೊಲ ಬ್ರಾಸಲೆಟ ಹಾಗೂ ರೇಷ್ಮೆ ಸೀರೆಗಳನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿ ಸೀರೆ ಕೊಟ್ಟಿರುತ್ತಾರೆ ಉಳಿದ ಯಾವದೇ ಬಂಗಾರದ ಒಡವೆಗಳನ್ನು ಕೊಟ್ಟಿಲ್ಲ ಎನ್ನುತ್ತಾರೆ. ನಮ್ಮ ಎಸ್ ಎಸ್ ಕೆ ಸಮಾಜದಲ್ಲಿ ಮದುವೆಯನ್ನು ಗಂಡಿನ ಕಡೆಯವರು ಮಾಡಬೇಕಾಗಿತ್ತು ಈ ಸಂಬಂದ ಎಸ ಎಸ್ ಮೇಹರವಾಡೆ ರವರು ನನ್ನ ಅಣ್ಣ ತಮ್ಮಂದಿರಿಗೆ ಹಣದ ಸಹಾಯ ಮಾಡಿರುತ್ತಾರೆಂದರೆ ಸಾಕ್ಷಿ ಅದು ನನಗೆ  ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರು ಕೊಟ್ಟಂತಹ ಸಾಲವನ್ನು ಪ್ರತಿವಾದಿ 2 ಮತ್ತು 3 ರವರು ಇನ್ನೂ ತೀರಿಸಿಕೊಳ್ಳುತ್ತಾ ಬರುತ್ತಿದ್ದಾರೆಂದರೆ ಸಾಕ್ಷಿ ಹಾಗೇನೂ ಇಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಆವಾಗಲೇ ತೀರಿದೆ ಎನ್ನುತ್ತಾರೆ.

2. ದಾವಾ ಆಸ್ತಿ ಸಂಖ್ಯೆ 1 ನ್ನು ನನ್ನ ತಂದೆ ಖರೀದಿಸಿದ್ದು ಅವರು ಯಾವಾಗ ಖರೀದಿಸಿದ್ದು ಎಂದು ನನಗೆ ನಿಖರವಾಗಿ ಹೇಳಲು ಆಗುವದಿಲ್ಲ. ದಾವಾ ಆಸ್ತಿ 2 ಮತ್ತು 3 ನ್ನು ಯಾರು ಯಾವಾಗ ಖರೀದಿ ಹಿಡಿದಿರುತ್ತಾರೆಂದರೆ ಸಾಕ್ಷಿ ನನ್ನ ತಂದೆ 1985 ರಲ್ಲಿ ಖರೀದಿ ಹಿಡಿದಿರುತ್ತಾರೆ ಎನ್ನುತ್ತಾರೆ. ದಾವಾ ಆಸ್ತಿ 1 ನ್ನು ಖರೀದಿ ಹಿಡಿದ ನಂತರ ನನ್ನ ತಂದೆಯವರು ಕಟ್ಟಡ ಕಟ್ಟಲು ಪ್ರಾರಂಬ ಮಾಡಿದ್ದರು ಎಂದರೆ ಸರಿ. ದಾವಾ ಆಸ್ತಿ ನಂಃ1 ರಿಂದ 3 ನನ್ನ ತಂದೆ ಸ್ವತಃ ಗಳಿಸಿದಂತಹ ಆಸ್ತಿ ಎಂದರೆ ಸರಿ. ನನ್ನ ತಂದೆ ಇದ್ದಾಗ ದಾವಾ

ಆಸ್ತಿ 1 ರಲ್ಲಿ ಸ್ಲಾಬ ವರೆಗೆ ಕಟ್ಟಡ ನಡೆದಿತ್ತು ಎಂದರೆ ಸರಿ. ಆ ನಂತರ ನನ್ನ ತಂದೆ ಹೃದಯಾಘಾತದಿಂದ ಮರಣ ಹೊಂದಿದರು ಎಂದರೆ ಸರಿ. ಸದರಿ ಕಟ್ಟಡ ಕಾಮಗಾರಿ ಮಾಡಲು ಆ ಸಮಯದಲ್ಲಿ ಹಣದ ಅವಶ್ಯಕತೆ ತುಂಬಾ ಇತ್ತು ಎಂದರೆ ಸರಿ. ಹಣದ ಅಡಚಣೆಯಿಂದ ಕಟ್ಟಡದ ಕಾಮಗಾರಿ ನಿಂತು ಹೋಗಿತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಸಮಯದಲ್ಲಿ ಎಂ ಎಂ ಮೇಹರವಾಡೆ ಇವರು ಸದರಿ ಕಟ್ಟಡವನ್ನು ಮುಂದುವರೆದು ಸಾಕಷ್ಟು ಸಹಾಯ ಮಾಡಿರುತ್ತಾರೆಂದರೆ ಸರಿ. ಸದರಿ ಕಟ್ಟಡವನ್ನು ಸಂಪೂರ್ಣಗೊಳಿಸುವವರೆಗೂ ಖರ್ಚು ಮಾಡಿ ನಂತರ ಆ ಬಗ್ಗೆ ಲೆಕ್ಕ ಮಾಡಿ ಆ ಹಣವನ್ನು ಹಿಂತಿರುಗಿಸಬೇಕೆಂಬ ಒಂದು ಕರಾರು ಮಾಡಿದ್ದು ಇದೆ ಎಂದರೆ ಸರಿ. ಮದುವೆ ಸಮಯದಲ್ಲಿ ತೆಗೆದುಕೊಂಡ ಹಣವನ್ನು ಹಾಗೂ ಕಟ್ಟಡಕ್ಕೆಂದು ತೆಗೆದಕೊಂಡ ಹಣವನ್ನು ಪ್ರತಿವಾದಿ 2 ಮತ್ತು 3 ರವರು ತೀರಿಸಿಕೊಂಡು ಬರುತ್ತಿದ್ದಾರೆಂದರೆ ಸಾಕ್ಷಿ 2000 ನೇ ಸಾಲಿನಲ್ಲಿ ಸದರಿ ಸಾಲವನ್ನು ತೀರಿಸಿದ್ದರು ಎನ್ನುತ್ತಾರೆ. ನಂತರ ಕಟ್ಟಡವನ್ನು ನನ್ನ ಅಣ್ಣಂದಿರ ಕಡೆ ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಕಟ್ಟಡ ಯಾವಾಗ ಪೂರ್ಣಗೊಂಡಿತು ಎಂದರೆ ಸಾಕ್ಷಿ 1991 ರಲ್ಲಿ ಪೂರ್ಣಗೊಂಡಿದೆ ಎನ್ನುತ್ತಾರೆ. 1991 ರಲ್ಲಿ ಪೂರ್ಣಗೊಂಡಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1991 ರಲ್ಲಿ ಪೂರ್ಣಗೊಂಡಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಕಟ್ಟಡ ಪೂರ್ಣಗೊಂಡ ಬಗ್ಗೆ ಮಾಹಿತಿ ಇಲ್ಲವೋ ಅಥವಾ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲವೋ ಎಂದರೆ ಸಾಕ್ಷಿ ಎರಡೂ ಇದೆ ಎನ್ನುತ್ತಾರೆ. ದಾಖಲೆಗಳ ಬಗ್ಗೆ ಮಾಹಿತಿ ಇದೆ ಎಂದು ಹೇಳಿದ್ದು ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮದುವೆ ಖರ್ಚಿಗಾಗಲಿ ಅಥವಾ ಕಟ್ಟಡದ ಖರ್ಚಿಗಾಗಲಿ ನೀವೇನಾದರೂ ಹಣ ಕೊಟ್ಟಿರಾ ಎಂದರೆ ಸಾಕ್ಷಿ ನಾವು ಇಲ್ಲಿರಲಿಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**